ಸೋಮು ಸಂತೆಯಲ್ಲಿ ಒಂದೆರಡು ಬಗೆಯ ತರಕಾರಿ ಕೊಂಡ. ಹದಿನೈದು ರೂಪಾಯಿ ಖರ್ಚಾಯಿತು. ನೂರರ ನೋಟು ಕೊಟ್ಟ. ತರಕಾರಿಯವನು, 'ಚಿಲ್ಲರೆ ಇಲ್ಲ, ನೀನೇ ಹದಿನೈದು ರೂಪಾಯಿ ಕೊಡು' ಎಂದು ಹೇಳಿ ನೂರರ ನೋಟನ್ನು ವಾಪಸ್ಸು ಕೊಟ್ಟ. ಅಷ್ಟರಲ್ಲಿ ಮತ್ತೊಬ್ಬ ಗಿರಾಕಿ ಬಂದಿದ್ದರಿಂದ ವ್ಯಾಪಾರಿಯ ಗಮನ ಅತ್ತ ಹೊರಳಿತು. 'ನನ್ನ ಹತ್ತಿರ ಚಿಲ್ಲರೆ ಇಲ್ಲ. ದಯವಿಟ್ಟು ನೀವೇ ಚಿಲ್ಲರೆ ಕೊಡಿ' ಎಂದು ಸೋಮು ಪುನಃ ಬೇಡಿಕೊಂಡ. 'ನೀನೊಬ್ಬ ಒಳ್ಳೆಯ ಗಿರಾಕಿ ಬಂದೆ' ಎಂದು ಪೇಚಾಡಿಕೊಳ್ಳುತ್ತಲೇ ಅವನು ಎಂಬತ್ತೈದು ರೂಪಾಯಿಗಳನ್ನು ಎಣಿಸಿ ಕೊಟ್ಟ. ಸೋಮು ಮತ್ತೆ ಮನೆಯ ಕಡೆ ಹೊರಟ.

ಮನೆಯ ಸಮೀಪ ಬಂದಿರಬೇಕು, ಅಮ್ಮ ಹಣವನ್ನು ಸರಿಯಾಗಿ ಎಣಿಸಿಕೊಂಡು ಬಾ ಎಂದು ಹೇಳಿದ್ದು ನೆನಪಾಯಿತು. ಜೇಬಿನಿಂದ ಹಣ ತೆಗೆದು ಎಣಿಸಿ ನೋಡಿದ. ಅವನ ಹತ್ತಿರ ನೂರಾ ಎಂಬತ್ತೈದು ರೂಪಾಯಿ ಇತ್ತು. ಅಂದರೆ ತಾನು ತರಕಾರಿಯವನಿಗೆ ನೂರು ರೂಪಾಯಿಯನ್ನು ಕೊಡಲಿಲ್ಲ. ಆದರೆ ಆತ ತನಗೆ ನೂರರ ಚಿಲ್ಲರೆಯನ್ನು ಕೊಟ್ಟಿದ್ದಾನೆ ಎನ್ನುವುದು ಗಮನಕ್ಕೆ ಬಂದಿತು. ಸೋಮು ಪುನಃ ಸಂತೆಯ ಕಡೆ ಓಡಿದ. ವ್ಯಾಪಾರಿಗೆ ವಿಷಯ ತಿಳಿಸಿದ.

ಅವನ ಪ್ರಾಮಾಣಿಕತೆಯನ್ನು ಕಂಡ ತರಕಾರಿ ವ್ಯಾಪಾರಿ 'ನಿನ್ನಂಥವರು ಈಗೆಲ್ಲಿ ಸಿಗುತ್ತಾರಯ್ಯ. ನಿನ್ನ ಗುಣ ನನಗೆ ಹಿಡಿಸಿತು. ದೇವರು ನಿನಗೆ ಒಳ್ಳೆಯದು ಮಾಡಲಿ' ಎಂದು ಪ್ರೀತಿಯಿಂದ ಇನ್ನಷ್ಟು ತರಕಾರಿ ಕೊಟ್ಟು ಕಳುಹಿಸಿದ. ಮನೆಗೆ ಬಂದ ಸೋಮು ನಡೆದುದೆಲ್ಲವನ್ನೂ ತಂದೆ ತಾಯಿಗೆ ಹೇಳಿದಾಗ ಇಬ್ಬರೂ ಸಂತೋಷ ಪಟ್ಟರು.

ಅಂದಿನಿಂದ ಆ ವ್ಯಾಪಾರಿ ಸೋಮುನನ್ನು ಯಾವಾಗ ಕಂಡರೂ ಪ್ರೀತಿಯಿಂದ ಮಾತನಾಡಿಸಿ ಒಂದಿಷ್ಟು ತರಕಾರಿ ಕೊಡುತ್ತಿದ್ದ. ಒಂದು ದಿನ ಶಾಲೆಯ ಶುಲ್ಕಕ್ಕಾಗಿ ಅವನ ತಾಯಿ ಅವನಿಗೆ ಐವತ್ತು ರೂಪಾಯಿ ಕೊಟ್ಟಿದ್ದಳು. ದಾರಿಯಲ್ಲಿ ಆ ನೋಟು ಹೇಗೋ ಕಳೆದು ಹೋಯಿತು. ತನ್ನ ಜೇಬನ್ನೆಲ್ಲಾ ತಡಕಾಡಿ ನೋಡಿದ. ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ. ಎಲ್ಲಿ ಹೋಯಿತೆಂದು ಗೊತ್ತಾಗಲೇ ಇಲ್ಲ. ಪೆಚ್ಚು ಮೋರೆ ಹಾಕಿಕೊಂಡು ನಿಂತಿದ್ದ.

ಅದೇ ಸಮಯಕ್ಕೆ ಸರಿಯಾಗಿ ಆ ತರಕಾರಿ ವ್ಯಾಪಾರಿ ಅದೇ ದಾರಿಯಿಂದ ಹೊರಟಿದ್ದ. ಸೋಮುವನ್ನು ಕಂಡವನೇ ಎಂದಿನಂತೆ ಮಾತನಾಡಿಸಿದ. ಆದರೆ ಸೋಮು ಪೆಚ್ಚು ಮೋರೆ ಹಾಕಿಕೊಂಡೇ ಉತ್ತರಿಸಿ. ಸೋಮುವನ್ನು ಕಂಡು ವ್ಯಾಪಾರಿಗೆ ಖೇದವೆನಿಸಿತು, 'ಏನಾಯಿತು?' ಎಂದು ಪ್ರೀತಿಯಿಂದ ಕೇಳಿದ. ಸೋಮು ತಾನು ಐವತ್ತು ರೂಪಾಯಿಗಳನ್ನು ಕಳೆದುಕೊಂಡಿರುವುದಾಗಿ ತಿಳಿಸಿದ. ಅದನ್ನು ಕೇಳಿದ ವ್ಯಾಪಾರಿ ಕೂಡಲೇ ತನ್ನ ಜೇಬಿನಿಂದ ಐವತ್ತು ರೂಪಾಯಿ ತೆಗೆದು ಕೊಡಲು ಮುಂದಾದ. ಸೋಮು 'ಬೇಡ, ನೀವೂ ಕಷ್ಟ ಪಟ್ಟು ದುಡಿಯುತ್ತೀರಿ' ಎಂದು ಅದನ್ನು ನಿರಾಕರಿಸಿದ. ಆಗ ವ್ಯಾಪಾರಿ, 'ಹಾಗಲ್ಲಪ್ಪ, ಇದು ನನಗೆ ಮಾರ್ಗಮಧ್ಯ ಸಿಕ್ಕಿತು. ನಿನ್ನದೇ ಇರಬೇಕು ತಗೊ' ಎಂದು ಒತ್ತಾಯದಿಂದ ಕೊಟ್ಟ.

ಅಂದು ಸೋಮು ತನಗೆ ನೂರು ರೂಪಾಯಿ ತೆಗೆದುಕೊಂಡು ಮೋಸ ಮಾಡಬಹುದಿತ್ತು. ಆದರೆ ಅದನ್ನು ವಾಪಸ್ಸು ತಂದು ಕೊಟ್ಟ. ಒಂದು ವೇಳೆ ನೂರು ರೂಪಾಯಿ ಹೋಗಿದ್ದರೂ ತಾನು ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅದರಲ್ಲಿಯೇ ಐವತ್ತು ರೂಪಾಯಿ ಕೊಡುತ್ತಿದ್ದೇನೆ ಎಂದುಕೊಂಡು ವ್ಯಾಪಾರಿ ಆ ಹಣ ಕೊಟ್ಟಿದ್ದ. ನಿಜ ಹೇಳಿದರೆ ಸ್ವಾಭಿಮಾನಿ ಸೋಮು ತನ್ನಿಂದ ಹಣ ಪಡೆಯುವುದಿಲ್ಲ ಎಂದುಕೊಂಡು ಅವನು ಹಾಗೆ ಹೇಳಿದ್ದ. ಸೋಮುವಿನ ಪ್ರಾಮಾಣಿಕತೆ ಸರಿಯಾದ ಸಮಯದಲ್ಲಿ ಫಲನೀಡಿತ್ತು. ❖